# ಇವ ನಮ್ಮವನೆಂದೆನಿಸಯ್ಯ

ಪರಿಶಿಷ್ಟ ಜಾತಿಯ ಮಹಿಳೆಯೊಬ್ಬಳು ಮಧ್ಯಾಹ್ನದ ಊಟ ಸಿದ್ಧಪಡಿಸಿದ್ದರಿಂದ ಮಕ್ಕಳು ಊಟ ಮಾಡುವುದನ್ನು ಬಿಟ್ಟ ಘಟನೆಗಳು ವರದಿಯಾಗಿವೆ. ಈ ಘಟನೆಗಳು ಎರಡು ಪ್ರಶ್ನೆಗಳನ್ನು ಭೂತಾಕಾರದಲ್ಲಿ ನಮ್ಮ ಮುಂದೆ ತಾಂಡವವಾಡುತ್ತವೆ. ಜಾತ್ಯತೀತ ರಾಷ್ಟ್ರವೆಂದು ಸಂವಿಧಾನದ ಪೀಠಿಕೆಯನ್ನು ಬರೀ ಉರುವು ಹೊಡಿಸುತ್ತಿದ್ದೇವೆಯೇ? ಜೀವನದ ಪಾಠ ಅಥವಾ ನಾಗರಿಕರನ್ನು ಬೆಳೆಸದೆಯೇ ಜಾತಿಭೇದವೆಣಿಸುವುದನ್ನು ಮಕ್ಕಳಿಗೆ ಹೇಳಿಕೊಡುತ್ತಿದ್ದೇವೆಯೇ? ಈ ಘಟನೆಗಳನ್ನು ನೋಡಿದರೆ ಎರಡೂ ಪ್ರಶ್ನೆಗಳಿಗೆ ಹೌದೆನ್ನುವ ಆತಂಕಕಾರಿ ಉತ್ತರವೇ ಎದುರಾಗುತ್ತದೆ.

ತಾಯಿ ವಾತ್ಸಲ್ಯಕ್ಕೆ ಜಾತಿಯ ಬಣ್ಣ ಬಂದಿದ್ದು ಹೇಗೆ? ಅನ್ನದಾತ ಬೆಳೆದ ಅಕ್ಕಿಗೆ ಜಾತಿ ಇರುವುದಿಲ್ಲ. ಅನ್ನವಾದಾಗ ಜಾತಿ ಬಂದಿದ್ದು ಹೇಗೆ? ಇದು ನಮ್ಮೆಲ್ಲರ ಮನಸ್ಥಿತಿಗೆ ಹಿಡಿದಿರುವ ಕನ್ನಡಿ ಆಗಿದೆ. ಆ ಶಾಲೆಗಳಲ್ಲಿ ಸಭೆಗಳು ನಡೆಯುತ್ತಿವೆ. ಚರ್ಚೆಗಳಾಗುತ್ತಿವೆ. ಆದರೆ ಇಂಥ ಮನಸ್ಥಿತಿ ಈಗಲೂ ಉಳಿದಿರುವಾಗ ನಮ್ಮ ಶಿಕ್ಷಣ ವ್ಯವಸ್ಥೆ ಕಲಿಸಿದ್ದು ಏನು? ಕಲಿಸುತ್ತಿರುವುದು ಏನು? ಯಾಕೆ ಯಾವ ಮಗುವೂ, ಅನ್ನಕ್ಕೆ ಭೇದವಿಲ್ಲ ಎಂದು ಹೆತ್ತವರನ್ನು ವಿರೋಧಿಸಲಿಲ್ಲ? ಹೆತ್ತವರ ಮಾತು ವಿರೋಧಿಸಿದ ಈ ಎಲ್ಲ ಮಕ್ಕಳೂ ವಿಧೇಯರೇನೂ ಅಲ್ಲ. ಅಪ್ಪ ಅಮ್ಮಂದಿರಿಗೆ ಜೋರು ಮಾಡಿ, ಫೋನು ಪಡೆಯುವ, ಹಣ ಪಡೆಯುವ ಮಕ್ಕಳು ಇಲ್ಲಿ ಯಾಕೆ ತಿರುಗಿ ನಿಲ್ಲಲಿಲ್ಲ? ಮಕ್ಕಳಲ್ಲಿ ಮೇಲರಿಮೆಯನ್ನು ಬಿತ್ತಿ ಬೆಳೆಸಲಾಗಿದೆ. ಅಹಂಕಾರದ ಜೊತೆಗೆ ದುರಹಂಕಾರವನ್ನೂ ಪೋಷಿಸಲಾಗುತ್ತಿದೆ. ಜಾತಿಯ ಕಾರಣಕ್ಕೆ ಅನ್ನವನ್ನೇ ಬೇಡ ಎನ್ನುವ ಮಕ್ಕಳು, ಧರ್ಮದ ಕಾರಣಕ್ಕೆ ಜೀವವನ್ನೇ ತೆಗೆಯುವ ಯುವಕರಾಗಿ ಬದಲಾಗುತ್ತಾರೆ.

ಕಿಶೋರಾವಸ್ಥೆಯಲ್ಲಿರುವ ಮಕ್ಕಳ ಮನಸಿನಲ್ಲಿ ನಾವೆಲ್ಲರೂ ಒಂದೆ, ಜಾತಿ ಒಂದೆ, ಮತ ಒಂದೆ, ಕುಲ ನಾವು ಮನುಜರು ಎಂದು ಹಾಡು ಹೇಳಿಸುತ್ತ, ಅದೇ ತತ್ವವನ್ನು ಎದೆಗಿಳಿಸಬೇಕಿತ್ತು. ಅಂಥ ಶಿಕ್ಷಕರು ಏನಾದರು? ಎಲ್ಲಿ ಹೋದರು? ಇಂದು ಇಂಥ ಘಟನೆಗಳಿಗೆ ಮಕ್ಕಳು ಮಾತು ಕೇಳಿದರು ಎಂದು ಸಮಾಧಾನ ಪಡುವ ಪೋಷಕರೂ ಎಚ್ಚರವಹಿಸಬೇಕು. ಮಕ್ಕಳು ಜೀವಪರವಾಗಿ ಯೋಚಿಸದಿದ್ದಲ್ಲಿ, ಹೆಚ್ಚುಗಾರಿಕೆಯ ವಿಷಯ ಬಂದಾಗ ಸರಳವಾಗಿ ಹೆತ್ತವರನ್ನೂ ಧಿಕ್ಕರಿಸಬಹುದು. ಇಂಥ ಘಟನೆಗಳಾದಾಗ ಹೆತ್ತವರ ಮತ್ತು ಮಕ್ಕಳ ಮನ ಒಲಿಸಬೇಕಾದ ಶಿಕ್ಷಕರೇಕೆ ಅಸಹಾಯಕರಾದರು ಎಂಬ ಪ್ರಶ್ನೆಯನ್ನೂ ನಾವು ಕೇಳಿಕೊಳ್ಳಬೇಕಿದೆ. ಸಮಾನರು ಎಂಬ ಪಾಠ ಹೇಳಬೇಕಾದವರೂ ತಮ್ಮ ಮನಸಿನೊಳಗಿರುವ ಜಾತಿ, ವರ್ಣಭೇದ ನೀತಿಗಳಿಗೆ ಇವರು ಕುಮಕ್ಕು ಕೊಟ್ಟಂತಾಗಿದೆ. ಬದಲಾವಣೆ ಆಗಬೇಕಿರುವುದು ಆ ಶಾಲೆಗಳ ಅಡುಗೆಯವರಲ್ಲಿ ಅಲ್ಲ. ಬದಲಾವಣೆ ಬರಬೇಕಿರುವುದು ಹೆತ್ತವರ ಯೋಚನಾ ಶಕ್ತಿಯಲ್ಲಿ. ಶಿಕ್ಷಣ ಪದ್ಧತಿಯಲ್ಲಿ. ಸಮವಸ್ತ್ರ ಧರಿಸಿದ ಕೂಡಲೆ ನಾವೆಲ್ಲ ಒಂದು ಎಂಬ ಭಾವ ಬೆಳೆಯಲಾಗುತ್ತಿಲ್ಲ ಎಂಬುದು ಈ ಪ್ರಕರಣಗಳಿಂದ ಸಾಬೀತಾಗಿದೆ. ಸಮವಸ್ತ್ರದೊಂದಿಗೆ ಮಾನವೀಯ ಮೌಲ್ಯಗಳನ್ನೂ ಬೆಳೆಸುವ ಕೆಲಸ ಶಾಲಾ ವ್ಯವಸ್ಥೆಯಲ್ಲಿ ಆಗಬೇಕಿದೆ. ಅದು ಕೇವಲ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆ ಇರುವ ಸರಕಾರಿ ಶಾಲೆಗಳಿಗೆ ಮಾತ್ರ ಸೀಮಿತವಲ್ಲ. ಮೇಲರಿಮೆ, ಕೀಳರಿಮೆಗಳನ್ನು ಬೆಳೆಸುವ ಎಲ್ಲ ಶಾಲಾ ವ್ಯವಸ್ಥೆಯಲ್ಲಿಯೂ ಈ 'ಸಮಾನರೆಂಬ ಭಾವ' ಬೆಳೆಯಬೇಕಿದೆ.

ಸಂವಿಧಾನದ ಓದು, ಸಂವಿಧಾನದ ಕುರಿತ ರಸಪ್ರಶ್ನೆ, ಭಾಷಣಗಳಂತೆಯೇ ಸಂವಿಧಾನದ ಮೂಲ ತತ್ವಗಳೊಂದಿಗೆ ಬದುಕುವುದನ್ನು ಹೇಳಿಕೊಡಬೇಕಿದೆ. ಪರಸ್ಪರ ಗೌರವ, ಪರಸ್ಪರ ಪ್ರೀತಿ ಪಠ್ಯಕ್ರಮದಲ್ಲಿರದಿದ್ದರೂ ಅದನ್ನು ಬೆಳೆಸುವ ಔದಾರ್ಯ ಶಿಕ್ಷಕವರ್ಗದ್ದೂ ಹೌದು. ಪಾಲಕರದ್ದೂ ಹೌದು. ಬಸವಣ್ಣನ ವಚನ 'ಇವನಾರವ, ಇವನಾರವ ಇವನಾರವನೆಂದಿನಿಸದಿರಯ್ಯ, ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ' ಎಂಬುದು ಕೇವಲ ಐದಂಕಿಗಳಿಗಾಗಿ ಬಾಯಿಪಾಠ ಮಾಡುವುದು, ಸಾರಾಂಶವನ್ನು ಬರೆಯುವುದಕ್ಕೆ ಮಾತ್ರ ಸೀಮಿತವಾದರೆ ನಾವು ಮಕ್ಕಳಿಗೆ ಸಾಕ್ಷರಸ್ಥರಾಗಿಸುತ್ತಿದ್ದೇವೆ. ಶಿಕ್ಷಿತರಾಗಿಸುತ್ತಿಲ್ಲ.

ಮಾಂಸಾಹಾರಿ ಮಕ್ಕಳು ಡಬ್ಬಿಗೆ ತಮ್ಮಿಷ್ಟದ ಊಟ ಒಯ್ಯುವಂತಿಲ್ಲ. ಒಯ್ದರೆ ಶಾಕಾಹಾರಿ ಸ್ನೇಹಿತರ ಅವಗಣನೆಗೆ ಒಳಗಾಗಬಹುದು ಎಂಬ ಆತಂಕವೂ ಇರುತ್ತದೆ. ತಮ್ಮನ್ನು ತಾವು ಉಳಿದ ಮಕ್ಕಳೊಂದಿಗೆ ಶಾಕಾಹಾರಿಗಳೆಂದೇ ಗುರುತಿಸಿಕೊಳ್ಳಲು ಇಷ್ಟಪಡುತ್ತಾರೆ. ಆಹಾರ ಸಂಸ್ಕೃತಿ, ಉಡುಗೆ ತೊಡುಗೆ ಇವೆಲ್ಲವನ್ನೂ ಹೆಚ್ಚುಗಾರಿಕೆ ತೋರಿಸುವ ಸಾಧನಗಳಂತೆ ಬಳಕೆಯಾದರೆ ನಮ್ಮ ಮುಂದಿನ ದಿನಗಳಲ್ಲಿ ಅಂತಃಕಲಹ, ವರ್ಣಭೇದ ಗಲಾಟೆಗಳಿಗೆ ಸಾಕ್ಷಿಯಾಗುವಂಥ ತಲೆಮಾರನ್ನೇ ನಾವು ಸಿದ್ಧಪಡಿಸುತ್ತಿದ್ದೇವೆ. ಆಗೀಗ ಧರ್ಮದ ಹೆಸರಿನಲ್ಲಿ ಜೀವ ತೆಗೆಯುವ, ಜಾತಿ ಹೆಸರಿನಲ್ಲಿ ಮರ್ಯಾದೆಗೇಡು ಹತ್ಯೆ ಮಾಡುವ ಸುದ್ದಿಗಳನ್ನು ಓದಿ, ಸ್ಪಂದಿಸುವ ತಲೆಮಾರನ್ನೂ ಕಳೆದುಕೊಳ್ಳುತ್ತೇವೆ. ಇದೆಲ್ಲವೂ ಸಹಜ ಎನ್ನುವ ಸ್ಥಿತಿಯೂ ಬಂದೀತು. ಅದಕ್ಕೂ ಮೊದಲು ಎಚ್ಚೆತ್ತುಕೊಂಡು, ಮೌಲಿಕ ಶಿಕ್ಷಣದಲ್ಲಿ ಮಕ್ಕಳಿಗೆ 'ನಾವೆಲ್ಲರೂ ಒಂದೇ, ಅನ್ನಕ್ಕೆ, ಪ್ರೀತಿಗೆ ಭೇದವಿಲ್ಲ' ಎಂಬುದು ಹೇಳಿಕೊಡಬೇಕಿದೆ. ಶಿಕ್ಷಣ ವ್ಯವಸ್ಥೆ ಈ ಬಗ್ಗೆ ಕಡ್ಡಾಯವೆಂಬ ಸೂತ್ರದ ಜೊತೆಗೆ ಪ್ರೀತಿಯಿಂದ ಒಳಗೊಳ್ಳುವ ಮಂತ್ರವನ್ನೂ ಹೇಳಿಕೊಡಬೇಕಿದೆ.

**ರಶ್ಮಿ ಎಸ್**

ಸಮವಸ್ತ್ರದೊಂದಿಗೆ ಮಾನವೀಯ ಮೌಲ್ಯಗಳನ್ನೂ ಬೆಳೆಸುವ ಕೆಲಸ ಶಾಲಾ ವ್ಯವಸ್ಥೆಯಲ್ಲಿ ಆಗಬೇಕಿದೆ. ಅದು ಕೇವಲ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆ ಇರುವ ಸರಕಾರಿ ಶಾಲೆಗಳಿಗೆ ಮಾತ್ರ ಸೀಮಿತವಲ್ಲ. ಮೇಲರಿಮೆ, ಕೀಳರಿಮೆಗಳನ್ನು ಬೆಳೆಸುವ ಎಲ್ಲ ಶಾಲಾ ವ್ಯವಸ್ಥೆಯಲ್ಲಿಯೂ ಈ 'ಸಮಾನರೆಂಬ ಭಾವ' ಬೆಳೆಯಬೇಕಿದೆ.

